ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ಯವರ ಕೋರ್ಟ್‌ನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 87.

ಮೃತಪಟ್ಟ ಬಸವೇಗೌಡರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಕರಿಗೌಡರು. ಮೃತಪಟ್ಟ ಸದರೀ ಬಸವೇಗೌಡರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ತಾಲ್ಲೂಕು ಕನ್ನೇಗೌಡನ ಕೊಪ್ಪಲ್ ಸ್ಥಳದ ಕರಿಗೌಡರು ಸದರೀ ವಾಸಸ್ಥರಾಗಿ ಮೃತಪಟ್ಟ ಬಸವೇಗೌಡರ ಜೊಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬ್ಯೆಯ್ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ವರಖಾಸ್ತುದಾರರಾದ ಕರಿಗೌಡರ ಅರ್ಜಿಯನ್ನು 1887ನೇ ಇಸವಿ ಮಾರ್ಚೀ ತಿಂಗಳು ತಾರೀಖು 22ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಸವೇಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಫಿಬ್ರವರೀ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಹಾಸನ ಡಿಸ್ಟ್ರಿಕ್ಟ್.

ಹೊಳೇನರಸೀಪುರದ ಸಬ್ ಡಿವಿಜ್ಞ ಮುನಸಿಫ್ ಕೋರ್ಟ್‌ನಲ್ಲಿ.

ಸ್ ೧೮೮೬ನೇ ಇಸವಿ ಸಿವಿಲ್ ನಂಬರ್ 732.

ವಾದಿ.

ಹೊಳೇನರಸೀಪುರದ ಕಸಬಾ ಹೋಬಳಿ ನಾಗಲಪುರದಲ್ಲಿ ಇರುವ ಈರೇಗವ್ವಡನ ಮಗ ಬಸವೇಗವ್ವಡ.

ಪ್ರತಿವಾದೀರು.

1ನೇ ಬಳ್ಳಾರಿ ಜಿಲ್ಲಾ ನಾರಾಯಣದೇವರ ಕೆರೆಯಲ್ಲಿರುವ ಮುಕುಂದಚಾರ ರತೀರಮಣಾಚಾರ್ ದೌಹಿತ್ರ ಮತ್ತು ಮೃತಪಟ್ಟ ಹೊಳೇನರಸೀಪುರದ ಕುರಡಿ ರಾಮಾಚಾರ್ ಹೆಂಡತಿ ಹನುಮಂತಬಾಯಿ ಪುರಫ್ ಕಮಲಾಬಾಯಿ,
2ನೇ ಹೊಳೇನರಸೀಪುರದಲ್ಲಿರುವ ಸಾವಿತ್ರಮ್ಮ.

ಮೇಲೆ ಹೇಳಿರುವ 1ನೇ ಪ್ರತಿವಾದೀಗೆ— ಮೇಲ್ಕಂಡ ವಾದಿ ಬಸವೇಗವ್ವಡನು, ಮೃತಪಟ್ಟ ನಿಮ್ಮ ಗಂಡ ಬರದುಕೊಟ್ಟು ಇರುವ ಖಾಫಾ ತಮಸೂಕು ಬಾಬತು 118—12—3 ಪೈಗಳನ್ನ ಬರಮಾಡಿಸಿಕೊಡಬೇಕೆಂದು ನಿಮ್ಮ ಮೇಲೆ ವ್ಯಾಜ್ಯ ತಂದಿರುತ್ತಾರಾಗಿ ಈ ಕೋರ್ಟಿನಲ್ಲಿ ನೀವಾಗಲಿ, ಈ ವ್ಯಾಜ್ಯಕ್ಕೆ ಸಂಬಂಧಿಸಿದ ಮುಖ್ಯಗ್ಳಾದ ದರೋಬಸ್ತು ಅಂಶಗಳಿಗೂ ಜವಾಬ್ ಹೇಳಲಿಕ್ಕೆ ಕ್ರಮಪ್ರಕಾರ ತಿಳಿಸಲ್ಪಟ್ಟ ಮತ್ತು ಸಮರ್ಥರಾದ ಅಥವಾ ಅಂಥಾ ದರೋಬಸ್ತು ಅಂಶಗಳಿಗೂ ಜವಾಬ್ ಹೇಳಲಿಕ್ಕೆ ಸಮರ್ಥನಾದ ಯಾವನಾದರೂ ಬಬ್ಬ ಇತರ ಮನುಷ್ಯನ ಸಂಗಡ ಬರುವ ಬಬ್ಬ ವಕೀಲನ ಮೂಲಕವಾಗಲಿ, ಸದರೀ ವಾದೀಗೆ ಜವಾಬ್ ಹೇಳಲಿಕ್ಕೆ ಈ ಕೋರ್ಟಿನಲ್ಲಿ ಸ್ ೧೮೮೭ನೇ ಇಸವಿ ಮಾರ್ಚೀ 28ನೇ ಮಂಗಳವಾರ ಬೆಳಿಗ್ಗೆ 11 ಘಂಟೆಗೆ ಹಾಜರಾಗುವಂತೆ ಇದರ ದೆಸೆಯಿಂದ ನೀವು ಸಮ್ಮನ್ ಮಾಡಲ್ಪಟ್ಟಿರುವದಲ್ಲದೆ ಮೇಲೆ ನಮೂದಿಸಲ್ಪಟ್ಟ ದಿನದಲ್ಲಿ ನೀವು ಹಾಜರಾಗದೆ ಹೋದರೆ ನಿಮ್ಮ ಗೈರ್ ಹಾಜರಿಯಲ್ಲಿ ಎಕ್ಸ್‌ಪಾರ್ಟಿಯಾಗಿ ಇಷ್ಯು ಮಾಡಲ್ಪಡುವದು.

ಸ್ ೧೮೮೭ನೇ ಇಸವಿ ಮಾರ್ಚೀ ಮಾಹೆ 8ನೇ ವಾರ್ಕಂನಲ್ಲಿ ನಮ್ಮ ದಸ್ತಖತ್ತುನಿಶಿ ಕೊಡಲ್ಪಟ್ಟಿತು.

ಸಿ. ಸುಬ್ಬರಾವ್,
ಮುನಸಿಫ್.